ಶತ್ರುಸಂಹಾರದ ಊಹಾಕತೆಗಳವರೆಗೂ ಸೇರಿಕೊಂಡು, ಸ್ವತಃ ಕವಿಗೇ ಅದೊಂದು 'ಕಾಯಂ ಕಾಮಿಕ್ ರಿಲೀಫ್' ಆಗತೊಡಗಿದ್ದಂತೆ ಕಾಣುತ್ತದೆ. ದೇವತೆಗಳನ್ನು ಕುರಿತ 'ಅವತಾರಗಳು' ಕೃತಿಯಲ್ಲಿ ಹಬ್ಬಿದ್ದ ತಮ್ಮ ವ್ಯಕ್ತಿತ್ವದ ಈ ಕಾಮಿಕ್ ಆಯಾಮವನ್ನು ಒಂದು ಘಟ್ಟದಲ್ಲಿ ಅವರು 'ಟ್ರ್ಯಾಜಿಕಾಮಿಕ್' (ದುರಂತ ವಿನೋದ) ಗದ್ಯದ ಮೂಲಕ ವಿಸ್ತರಿಸಿಕೊಂಡರು. ಅವರ ಆತ್ಮಕತೆ 'ಊರು ಕೇರಿ' ಮತ್ತೆ ಅವರನ್ನು ಕನ್ನಡ ಸಾಹಿತ್ಯ ಸಂಸ್ಕೃತಿಯ ಕೇಂದ್ರಕ್ಕೆ ತಂದು ನಿಲ್ಲಿಸಿತು.

'ಊರು ಕೇರಿ' ಮರಾಠಿ ಆತ್ಮಕತೆಗಳ ಪರಿಚಿತ ಮಾದರಿಗಿಂತ ಭಿನ್ನವಾಗಿತ್ತು; ಆದರೆ ಆತ್ಮಶೋಧನೆಯ ಅಗತ್ಯಗಳನ್ನು ಬದಿಗೆ ಸರಿಸಿ ಆಯ್ದ ಅನುಭವಗಳ, ಅವಮಾನಗಳ, ಘಟನಾವಳಿಗಳ, ವ್ಯಕ್ತಿತ್ವ ನಿರ್ಮಾಣದ ಮಂಡನೆಯಾಯಿತು. ಡಿ.ಆರ್. ನಾಗರಾಜ್ ತೊಂಬತ್ತರ ದಶಕದಲ್ಲಿ ಅಕ್ಷರ ಚಿಂತನಮಾಲೆಗಾಗಿ ಅವೈದಿಕ ಲೋಕದರ್ಶನಗಳನ್ನು ಕುರಿತ ಪುಸ್ತಕಗಳನ್ನು ಸಂಪಾದಿಸುತ್ತಿದ್ದರು. 'ಕವಿಗಳೇ! 'ಊರು ಕೇರಿ' ಮೊದಲು ಅಕ್ಷರ ಚಿಂತನಮಾಲೆಯಲ್ಲೇ ಬರಬೇಕು! ಕೈ ಕೊಟ್ಟೀರಿ!' ಎಂದು ಡಿ.ಆರ್. ಧಮಕಿ ಹಾಕುತ್ತಿದ್ದರು. 'ಊರು ಕೇರಿ'ಯಲ್ಲಿ ಹಬ್ಬಿದ್ದ ದುಗುಡದ ಜೊತೆಗೆ, 'ಬಡವರ ನಗುವಿನ ಶಕ್ತಿ'ಯನ್ನು ಕುರಿತು ಡಿ.ಆರ್. ಬರೆದ ಅನನ್ಯ ತಾತ್ವಿಕ ಮುನ್ನುಡಿ ಈ ಆತ್ಮಕತೆಯನ್ನು ಓದಬೇಕಾದ ದಿಕ್ಕೊಂದನ್ನು ತೋರಿಸಿತು. ಸಿದ್ಧಲಿಂಗಯ್ಯನವರನ್ನು 'ಕವಿಗಳೇ' ಎಂದು ಕರೆದ ಮೊದಲಿಗರು ಡಿ.ಆರ್.; ಬರಬರುತ್ತಾ ಕನ್ನಡ ಸಂಸ್ಕೃತಿಯಲ್ಲಿ 'ಕವಿಗಳು' ಎಂಬುದು ಸಿದ್ಧಲಿಂಗಯ್ಯನವರ ಇನ್ನೊಂದು ಹೆಸರಾಗಿ ಉಳಿದುಬಿಟ್ಟಿತು. ಸಿದ್ಧಲಿಂಗಯ್ಯನವರ ಕಾವ್ಯ, ಆತ್ಮಕತೆ, ವ್ಯಕ್ತಿತ್ವ, ಚಳವಳಿ ಎಲ್ಲವನ್ನೂ ಕುರಿತು ಡಿ.ಆರ್. ನಾಗರಾಜ್ ಕನ್ನಡ, ಇಂಗ್ಲಿಷ್ ಎರಡೂ ಭಾಷೆಗಳಲ್ಲಿ ಬರೆದಿದ್ದಾರೆ. ಕನ್ನಡದ ಅಸಂಖ್ಯಾತ ಹಿರಿಯ, ಕಿರಿಯ ಲೇಖಕರು ಸಿದ್ಧಲಿಂಗಯ್ಯನವರ ಕೃತಿಗಳ ಬಗ್ಗೆ ಬರೆದಿದ್ದಾರೆ. ಲಂಕೇಶರು 'ಊರುಕೇರಿ'ಯ ವಿದೂಷಕ ಗುಣವನ್ನು ಟೀಕಿಸಿದ್ದಾರೆ. ಈ ಬಗೆಯ ವ್ಯಾಪಕ ಸಾಂಸ್ಕೃತಿಕ ಸ್ವೀಕಾರ ಹಾಗೂ ಸಾಹಿತ್ಯಿಕ ಅದೃಷ್ಟ ಕೂಡ ಸಿದ್ಧಲಿಂಗಯ್ಯನವರನ್ನು ಕನ್ನಡ ಸಾಹಿತ್ಯದ ಅನನ್ಯ ವಿದ್ಯಮಾನವನ್ನಾಗಿಸಿದೆ. ಮುಂದೆ 'ಊರು ಕೇರಿ'ಯ ಎರಡನೆಯ ಹಾಗೂ ಮೂರನೆಯ ಭಾಗಗಳನ್ನು ಕೊಂಚ ಬಿಡುಬೀಸು ಶೈಲಿಯಲ್ಲಿ ಬರೆದ ಅವರು ನಾಲ್ಕನೆಯ ಭಾಗವನ್ನು ಬರೆಯಲು ಈಚೆಗೆ ಟಿಪ್ಪಣಿ ಮಾಡಿಕೊಳ್ಳುತ್ತಿದ್ದರು.

## ಎಲ್ಲ ಕಾಲದ ವಿಮೋಚನೆಯ ಗುರುಗಳು

ತಾರುಣ್ಯದ ಆರಂಭದಲ್ಲಿ ಮಾರ್ಕ್ಸ್‌ವಾದಿ ಎಂಬ ಹೆಮ್ಮೆ, ಟೀಕೆ ಎರಡಕ್ಕೂ ಒಳಗಾಗಿ, ನಂತರ ಅಂಬೇಡ್ಕರ್‌ವಾದದತ್ತ ನಡೆದ ಸಿದ್ಧಲಿಂಗಯ್ಯನವರು ಪೆರಿಯಾರರ ವೈಚಾರಿಕ ಚಿಂತನೆಯಿಂದ ಪಡೆದದ್ದು ಕೂಡ ಇಷ್ಟೇ ಮುಖ್ಯವಾಗಿತ್ತು. ಗಾಂಧೀ ಚಿಂತನೆಗಳನ್ನು ಮೊದಲಿಗೆ ಅಷ್ಟು ಒಪ್ಪದ ಅವರಿಗೆ ಒಮ್ಮೆ ಲಂಕೇಶರು, 'ಗಾಂಧೀಜಿ 'ಹರಿಜನ್' ಪತ್ರಿಕೆಯಲ್ಲಿ ಬರೆದ ಬರಹಗಳನ್ನು ಓದಿ, ನಂತರ ತೀರ್ಮಾನಕ್ಕೆ ಬನ್ನಿ' ಎಂದು ಹೇಳಿದರು. ನಂತರ ಸಿದ್ಧಲಿಂಗಯ್ಯ ಗಾಂಧೀಜಿಯ 'ಹರಿಜನ್' ಸಂಪುಟಗಳನ್ನು ಲೈಬ್ರರಿಯಲ್ಲಿ ಕೂತು ಓದಿದರು. ಕೆಲವು ಸುಂದರ ಭಾವಗೀತಾತ್ಮಕ ವ್ಯಕ್ತಿಚಿತ್ರಗಳನ್ನು ಬರೆದಿರುವ ಅವರು ಮುಂದೊಮ್ಮೆ ಆತ್ಮೀಯವಾಗಿ ಬರೆದ 'ಗಾಂಧಿ' ಕನ್ನಡದ ಅತ್ಯುತ್ತಮ ಗಾಂಧೀ ಗೀತೆಗಳಲ್ಲೊಂದು. ಒಂದು ನಡುರಾತ್ರಿ ನಾನು ಅವರೊಡನೆ ಕಲಾಸಿಪಾಳ್ಯದ ಬಸ್ ನಿಲ್ದಾಣ ಹಾದು ಹೋಗುತ್ತಿರುವಾಗ, ಒಂದು ಕಾಲಕ್ಕೆ ಆ ಸುತ್ತಮುತ್ತಲಲ್ಲಿ ಅವರ ಬೆನ್ನು ಹತ್ತಿದ್ದ ಗೂಂಡಾಗಳ ಬಗ್ಗೆ ಕೇಳಿದೆ. 'ನಾನು ಗಾಂಧೀ ಓದ್ಕೊಂಡ ಮೇಲೆ ಈ ಪರ್ಸಿಕ್ಯೂಶನ್ ದಿಗಿಲಿನಿಂದ ಪಾರಾದೆ' ಎಂಬ ಅವರ ಮಾತು ಗಾಂಧೀಜಿಯಿಂದ ನಿರ್ಭಯತೆಯನ್ನು ಅರಿಯುವ ನೋಟವನ್ನು ನನಗೆ ಕಲಿಸಿಕೊಟ್ಟಿತು. ಸಿದ್ಧಲಿಂಗಯ್ಯನವರ ಒಟ್ಟು ಬರವಣಿಗೆಯಲ್ಲಿ ಮಾರ್ಕ್ಸ್, ಅಂಬೇಡ್ಕರ್, ಪೆರಿಯಾರ್, ಬುದ್ಧ,